

## ಮನೆಯಾಯಿತು ಕಚೇರಿ

ಬೆಳಗಾದರೆ ಕೆಲಸಕ್ಕೆ ಹೋಗುವ ತರಾತುರಿಯಲ್ಲಿ ಮನೆಗಳು ಕಾರ್ಖಾನೆಗಳ ರೂಪ ತಾಳುವ ಚಿತ್ರಗಳು ಲಾಕ್‌ಡೌನ್ ಸಂದರ್ಭದಲ್ಲಿ ತೆರೆಮರೆಗೆ ಸಂದವು. ಸಾಫ್ಟ್‌ವೇರ್ ಉದ್ಯೋಗಿಗಳಿಗೆ ಪರಿಚಿತವಾಗಿದ್ದ, ಮನೆಯಿಂದಲೇ ಕೆಲಸ ಮಾಡುವ ಪರಿಕಲ್ಪನೆ (ವರ್ಕ್ ಫ್ರಂ ಹೋಮ್) ವಿವಿಧ ಕ್ಷೇತ್ರಗಳ ಉದ್ಯೋಗಿಗಳಿಗೂ ದೊರೆಯಿತು. ಇದರಿಂದಾಗಿ ಮನೆಗಳು ಕಚೇರಿಗಳ ರೂಪ ತಾಳಿದವು. ವಿಚಿತ್ರವಾದ ಮೌನ ಮನೆಗಳನ್ನು ಆವರಿಸಿಕೊಂಡಿತು.

ಮನೆಯಿಂದ ಕೆಲಸ ಮಾಡುವುದು ಕೆಲವು ಉದ್ಯೋಗಿಗಳಿಗೆ, ವಿಶೇಷವಾಗಿ ಮಹಿಳಾ ಉದ್ಯೋಗಿಗಳಿಗೆ ಅನುಕೂಲವನ್ನೂ ಒದಗಿಸಿತು. ನಗರಪ್ರದೇಶಗಳಲ್ಲಿ ಕಚೇರಿಗೆ ಹೋಗಿಬರುವ ಪ್ರಯಾಣದ ಸಮಯ ಉಳಿದದ್ದು ಅನೇಕರಿಗೆ ಬೋನಸ್ ದೊರೆತಂತಾಯಿತು. ಆದರೆ, ಇನ್ನೂ ಕೆಲವರಿಗೆ ಮನೆಯಿಂದ ಕೆಲಸ ಮಾಡುವುದು ಒತ್ತಡವಾಗಿ ಪರಿಣಮಿಸಿದ್ದೂ ಇದೆ. ಕಚೇರಿಯ ಚೌಕಟ್ಟಿನಲ್ಲಿ ದೊರೆಯುತ್ತಿದ್ದ ಅನುಕೂಲಗಳನ್ನು ಮನೆಯಲ್ಲಿ ಹೊಂದಿಕೊಳ್ಳುವುದು ಎಲ್ಲರಿಗೂ ಸಾಧ್ಯವೆ? ಅಲ್ಲದೆ, ಕಚೇರಿಯಲ್ಲಿ ಗೆಳೆಯರ ನಡುವೆ ಸಲೀಸಾಗಿ ನಡೆಯುತ್ತಿದ್ದ ಕೆಲಸ, ಈಗ ಒಂಟಿಯಾಗಿ ಮಾಡುವುದು ಕೂಡ ಕೆಲವರಿಗೆ ಸಮಸ್ಯೆಯಾಗಿ ಪರಿಣಮಿಸಿತು.

‘ಕೆಲಸಗಳ್ಳ’ರಾಗದಂತೆ ಉದ್ಯೋಗಿಗಳನ್ನು ಗಮನಿಸುವ ಕಣ್ಣುಗಳಿಂದಾಗಿ ‘ವರ್ಕ್ ಫ್ರಂ ಹೋಮ್’ ಕೆಲವರಿಗೆ ಅಸುಖವಾಗಿ ಬದಲಾಯಿತು. ಬದಲಾದ ಪರಿಸ್ಥಿತಿಯಲ್ಲಿ, ಮನೆಯಲ್ಲಿಯೇ ಉಳಿಯಬೇಕಾದ ಪರಿಸ್ಥಿತಿ ಬರಬಹುದೇನೊ ಎನ್ನುವ ಆತಂಕವೂ ಕೆಲವರನ್ನು ಕಾಡಿತು. ಕೆಲಸದ ಸ್ವರೂಪ ಬದಲಾಗಿ, ಜೈವಿಕ ಚಕ್ರದಲ್ಲಿ ಏರುಪೇರುಂಟಾಗಿ, ದೈಹಿಕ ಚಟುವಟಿಕೆಗಳು ಕಡಿಮೆಯಾದವು. ಇದೆಲ್ಲದರ ಪರಿಣಾಮವಾಗಿ ಕೆಲವರು ಮಾನಸಿಕ ಒತ್ತಡಕ್ಕೆ, ಖಿನ್ನತೆಗೆ ಒಳಗಾದರು.

ಮನೆಯಲ್ಲಿಯೇ ಕೆಲಸ ಮಾಡುವ ಪದ್ಧತಿ ಆರಂಭವಾದುದರಿಂದ, ಉದ್ಯೋಗಿಗಳು ಹೊರಗೆ ಹೆಚ್ಚು ಬರದಂತಾದುದು ಪೇಟೆಯ ಮೇಲೂ ಪರಿಣಾಮ ಬೀರಿತು. ಹೋಟೆಲ್, ಸಾರಿಗೆ, ಮನರಂಜನೆಯ ಸೇವೆಗಳು ಸೇರಿದಂತೆ ಹಲವು ಕ್ಷೇತ್ರಗಳ ಆದಾಯದ ಮೇಲೆ ವರ್ಕ್ ಫ್ರಂ ಹೋಮ್ ಪರಿಣಾಮ ಬೀರಿದೆ. ■

## ವೈದ್ಯಕೀಯ ನಂಬಿಕೆಗಳ ಪಲ್ಲಟ

ಮಾತಾಪಿತೃಗಳ ಜೊತೆಗೆ ಗುರು ಹಾಗೂ ವೈದ್ಯರನ್ನು ಭಾರತೀಯ ಸಂಸ್ಕೃತಿ ದೇವರಂತೆ ಕಾಣುತ್ತದೆ. ದೇವರುಗಳ ಪಟ್ಟಿಯಲ್ಲಿನ ‘ವೈದ್ಯ ನಾರಾಯಣ’ನ ಬಗ್ಗೆ ಲಾಕ್‌ಡೌನ್ ಸಮಯ ಜನರಲ್ಲಿ ಆತಂಕ–ಅಪನಂಬಿಕೆ ಮೂಡಿಸಿತು. ಕೊರೊನಾ ಸೋಂಕಿನ ಆತಂಕದಿಂದಾಗಿ ವೈದ್ಯಕೀಯ ಸೇವೆಯಲ್ಲಿ ಪಲ್ಲಟಗಳಾದವಷ್ಟೇ. ಕೊರೊನಾ ಹೊರತಾದ ಸಮಸ್ಯೆಗಳಿಂದ ಬಳಲುತ್ತಿದ್ದವರಿಗೆ ಚಿಕಿತ್ಸೆ ದೊರೆಯದಾಯಿತು. ಅನೇಕ ವೈದ್ಯರು ಸೋಂಕಿನ ಭಯದಿಂದ ಕ್ಲಿನಿಕ್‌ಗಳನ್ನು ಮುಚ್ಚಿದರು. ವೈದ್ಯರನ್ನು ನೇರವಾಗಿ ಮುಖಾಮುಖಿಯಾಗುವುದೇ ಅಸಾಧ್ಯ ಎನ್ನುವ ಸ್ಥಿತಿ ಎದುರಾಯಿತು. ತುರ್ತು ಸಂದರ್ಭಗಳಲ್ಲಿ ಆಸ್ಪತ್ರೆಗೆ ಎಡತಾಕಿದರೂ, ಮೊದಲು ಕೋವಿಡ್ ಪರೀಕ್ಷೆ ಎನ್ನುವಂತಾಯಿತು. ಕೆಲವೆಡೆ, ಸಣ್ಣಪುಟ್ಟ ಸಮಸ್ಯೆಗಳಿಗೆ ಸಕಾಲದಲ್ಲಿ ವೈದ್ಯಕೀಯ ಚಿಕಿತ್ಸೆ ದೊರೆಯದೆ, ಸಾವು ಸಂಭವಿಸಿದ ಘಟನೆಗಳೂ ನಡೆದವು.

ವೈದ್ಯ ಮತ್ತು ರೋಗಿಯ ನಡುವೆ ಅಪನಂಬಿಕೆ ಮೂಡಿದ್ದು 2020ರ ಸಾಮಾಜಿಕ ವೈಪರೀತ್ಯಗಳಲ್ಲೊಂದು. ಖಾಸಗಿ ಆಸ್ಪತ್ರೆಗಳು ಜನರ ಸುಲಿಗೆ ಮಾಡುತ್ತವೆ ಎನ್ನುವ ಭಾವನೆ ಕೊರೊನಾ ಪೂರ್ವದಲ್ಲೂ ಜನರ ಮನಸ್ಸಿನಲ್ಲಿತ್ತು. ಈ ಭಾವನೆ ಲಾಕ್‌ಡೌನ್ ಸಮಯದಲ್ಲಿ ಆತಂಕವಾಗಿ ಬದಲಾಯಿತು.

ಇದಕ್ಕೆ ತಕ್ಕನಾಗಿ, ಕೊರೊನಾ ಕಾರಣದಿಂದಾಗಿ ಖಾಸಗಿ ಆಸ್ಪತ್ರೆಗೆ ದಾಖಲಾದ ಕೆಲವರು, ಕಾಯಿಲೆಗಿಂತಲೂ ಹೆಚ್ಚಾಗಿ ಲಕ್ಷಾಂತರ ರೂಪಾಯಿ ಮೊತ್ತದ ಬಿಲ್ ನೋಡಿಯೇ ಹೈರಾಣದಾದ ಪ್ರಸಂಗಗಳು ದೇಶದ ಎಲ್ಲೆಡೆ ವರದಿಯಾದವು. ಸರ್ಕಾರ ಮಧ್ಯಪ್ರವೇಶಿಸಿ, ಬೆಲೆ ನಿಗದಿಪಡಿಸಿದರೂ ಪರಿಸ್ಥಿತಿಯೇನೂ ಹೆಚ್ಚು ಬದಲಾಗಲಿಲ್ಲ. ಸಾಯುವುದಾದರೆ ಮನೆಗಳಲ್ಲೇ ಸಾಯೋಣ ಎಂದು ಆರೋಗ್ಯ ಸಮಸ್ಯೆ ತಲೆದೋರಿದರೂ ನಿರ್ಲಕ್ಷಿಸುವ ಇಲ್ಲವೇ ಸ್ವಯಂ ವೈದ್ಯ ಮಾಡಿಕೊಳ್ಳುವವರ ಸಂಖ್ಯೆ ಹೆಚ್ಚಾಯಿತು.

ಸಮಸ್ಯೆಯ ಇನ್ನೊಂದು ತುದಿಯಲ್ಲಿ, ಕೊರೊನಾ ಕಾರಣದಿಂದಾಗಿ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿ ಕೂಡ ಸಾಕಷ್ಟು ಸಂಕಷ್ಟ ಎದುರಿಸಬೇಕಾಯಿತು. ಸೋಂಕಿನ ಆತಂಕದ ನಡುವೆಯೇ ಬಿಡುವಿಲ್ಲದ ದುಡಿಮೆ ಅವರ ಮೈಮನಗಳನ್ನು ಗಾಸಿಗೊಳಿಸಿತು. ಕೆಲಸ–ಕ್ವಾರಂಟೈನ್ ನಡುವೆ ಖಾಸಗಿ ಬದುಕೇ ಇಲ್ಲವಾಯಿತು. ಸುರಕ್ಷತಾ ಕ್ರಮಗಳ ನಡುವೆಯೂ ಕೆಲವು ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿ ಸೋಂಕಿಗೊಳಗಾಗಿ ಜೀವಕಳೆದುಕೊಂಡರು. ■

ಚೆನ್ನೈನಲ್ಲಿ ಡಾ. ಸೈಮನ್ ಹರ್ಕ್ಯುಲಸ್ ಎನ್ನುವ ವೈದ್ಯರು, ಅದೇ ರೋಗಾಣುವಿನ ಸೋಂಕಿಗೊಳಗಾಗಿ ನಿಧನರಾದಾಗ ಅವರ ಅಂತ್ಯಸಂಸ್ಕಾರಕ್ಕೆ ಅಡ್ಡಿ ಎದುರಾಯಿತು. ಜನರು ದೊಣ್ಣೆಗಳಿಂದ ಹಲ್ಲೆ ನಡೆಸಿ, ಕಲ್ಲುತೂರಾಟ ನಡೆಸಿದರು. ಮಂಗಳೂರಿನಲ್ಲಿ 75 ವರ್ಷದ ವೃದ್ಧೆಯ ಅಂತಿಮ ವಿಧಿವಿಧಾನಗಳ ಸಂದರ್ಭದಲ್ಲೂ ಅಡ್ಡಿ ಎದುರಾಯಿತು. ‘ಕೊರೊನಾದಿಂದಾಗಿ ಸಾವಿಗೀಡಾದವರನ್ನು ಆಯಾ ಸಮುದಾಯದ ನಂಬಿಕೆಗೆ ಅನುಸಾರವಾಗಿ ಅಂತಿಮಸಂಸ್ಕಾರ ನಡೆಸಲು ಅವಕಾಶ ಕಲ್ಪಿಸಬೇಕು’ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದ್ದರೂ, ಸಾರ್ವಜನಿಕರು ವದಂತಿಗಳನ್ನು ನೆಚ್ಚಿಕೊಂಡು ಸಾವಿನ ಸಂದರ್ಭದಲ್ಲಿ ಮಾನವೀಯತೆ ಮರೆತರು.